# ಶರಣರ ವಚನಗಳಲ್ಲಿ ಪರಿಸರ ಪ್ರಜ್ಞೆ

ಶ್ರೀ ಶಂಭನಗೌಡ ನೀರಲಗಿ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಶ್ರೀ ಶಿವಯೋಗಿ ಮುರುಘೇಂದ್ರ ಸ್ವಾಮೀಜಿ, ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಅಥಣಿ.

DOI: https://doi.org/10.5281/zenodo.16678689

## ABSTRACT:

ವಚನಕಾರರು ಪರಿಸರವನ್ನು ದೇವರ ಸಮಾನವಾಗಿ ಕಂಡು ಅದನ್ನು ಪೂಜಿಸುವುದು ಮತ್ತು ಸಂರಕ್ಷಿಸುವುದನ್ನು ಪ್ರತಿಪಾದಿಸಿದ್ದಾರೆ. ಪರಿಸರವನ್ನು ಭೌತಿಕ ವಸ್ತುವಾಗಿ ನೋಡದೆ, ಅದು ದೈವತ್ವದ ಅಭಿವ್ಯಕ್ತಿ ಮತ್ತು ಮನುಷ್ಯ-ಪ್ರಕೃತಿ ಒಂದೇ ಎಂದು ನಂಬಿದವರು ಅವರು. ಪಶು, ಪ್ರಾಣಿ, ಕೀಟ, ಸಸ್ಯ, ಸಂಕುಲ ಸಮತೋಲನದಲ್ಲಿದ್ದರೆ ಜಗತ್ತು ಚೆನ್ನಾಗಿರುತ್ತದೆ, ಪರಿಸರ ಉತ್ತಮವಾಗಿದ್ದರೆ ಮಾತ್ರ ಎಲ್ಲರೂ ಸುಖವಾಗಿ ಬಾಳಲು ಸಾಧ್ಯವಾಗುತ್ತದೆ. ಪರಿಸರದ ಮೇಲೆ ಮಾನವನ ದೌರ್ಜನ್ಯ ನಿಲ್ಲಬೇಕು. ಪಂಚಭೂತಗಳು ದೇವರ ಭಿಕ್ಷೆ, ಅವುಗಳನ್ನು ಕಲುಷಿತಗೊಳಿಸುವುದು ಮನುಷ್ಯನಿಗೆ ಸಲ್ಲದು. ಬಸವಣ್ಣನವರು ಒಂದು ಜೀವಿಗೂ ತೊಂದರೆ ಕೊಡದಂತೆ ಬದುಕಬೇಕೆಂದು “ಕೊಲ್ಲೆನ್ನಯ್ಯ, ಮೆಲ್ಲೆನ್ನಯ್ಯ” ಎಂದು ಜೀವನದ ಪವಿತ್ರತೆಯನ್ನು ಸಾರಿದ್ದಾರೆ. “ದಯವೇ ಧರ್ಮದ ಮೂಲ. ಭಯದ ಧರ್ಮ ಬೇಡ” ಎಂದು ಶರಣರು ಬೋಧಿಸಿದ್ದಾರೆ. ಶರಣರ ಚಿಂತನಾ ಕ್ರಮದಲ್ಲಿ ಪ್ರಜ್ಞೆ ಎನ್ನುವುದು ಮನುಷ್ಯನಲ್ಲಿ ಆಂತರಿಕವಾಗಿ ನಡೆಯುವ ಕ್ರಿಯೆ. ಪ್ರಜ್ಞೆ ಇಲ್ಲಿ ಅಂತರಂಗದ ದನಿ. ಪರಿಸರ- ಮನುಷ್ಯನ ಸುತ್ತಮುತ್ತಲಿನ ಹೊರಲೋಕ. ಜೀವಜಾಲವನ್ನು ತನ್ನ ಒಡಲಲ್ಲಿ ಇಟ್ಟುಕೊಂಡ ಬಾಹ್ಯ ಲೋಕ. ಒಂದು ಅಂತರಂಗದ ಅರಿವಾದರೆ, ಇನ್ನೊಂದು ಜೀವಲೋಕವನ್ನು ಹೊರಗಿನಿಂದ ಪೊರೆಯುವಂತಹುದು ಮತ್ತು ಜಾಗತಿಕ ತಾಪಮಾನ ನಿಯಂತ್ರಿಸಲು ಮೂಡಿಸುವ ಅರಿವು ಪರಿಸರ ಪ್ರಜ್ಞೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಪ್ರಕೃತಿ ಸಂರಕ್ಷಣೆಯೇ ಮನುಷ್ಯನಿಗಿರಬೇಕಾದ ಪರಿಸರ ಪ್ರಜ್ಞೆ. ನಿರುಪಾದಿಕವಾಗಿರುವ ಭೂಮಿ, ಆಕಾಶ, ಅಗ್ನಿ, ವಾಯು, ಜಲ ಎಲ್ಲವೂ ಕೂಡಿದ ಒಟ್ಟು ಅಂಶವೇ ಪ್ರಕೃತಿಯಲ್ಲವೇ? ವಚನ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯನ್ನು ಪ್ರಕೃತಿ ಶಬ್ದದ ಹಿನ್ನೆಲೆಯಲ್ಲಿ ಗ್ರಹಿಸುವ ಚಿಕ್ಕ ಪ್ರಯತ್ನ ಈ ಬರಹ.

## KEYWORDS:

ಮನುಷ್ಯ, ಪ್ರಕೃತಿ, ಜಲ, ಭೂಮಿ, ಆಕಾಶ, ಅಗ್ನಿ, ವಾಯು.

ಪ್ರಕೃತಿ ಹಾಗೂ ಮನುಷ್ಯನ ನಡುವೆ ಅವಿನಾಭಾವ ಸಂಬಂಧವಿದೆ. ಪ್ರಕೃತಿ ಮನುಷ್ಯನಿಗೆ ಒಮ್ಮೆ ವರವಾಗಿ ಕೆಲವೊಮ್ಮೆ ಶಾಪವಾಗಿದ್ದು ಅಷ್ಟೇ ಸತ್ಯ. ಮನುಷ್ಯನ ದುರಾಸೆ ಇಂದು ಪ್ರಕೃತಿ ವಿಕೋಪಕ್ಕೆ ಕಾರಣವಾಗುತ್ತಿದೆ. ಹನ್ನೆರಡನೆಯ ಶತಮಾನದ ವಚನಕಾರರು ಪ್ರಕೃತಿಯನ್ನು ಪ್ರೀತಿಸಿದರು, ಆರಾಧಿಸಿದವರು. ಸಮುದ್ರ ಒಮ್ಮೊಮ್ಮೆ ತನ್ನ ಸೀಮೆಯನ್ನು ಮೀರಿ ಉಕ್ಕಿ ಬೋರ್ಗರೆಯುವುದುಂಟು. ಬಸವಣ್ಣನವರ ಕಾಲಜ್ಞಾನ ವಚನದಲ್ಲೂ 'ಮಂಜಿನ ಮಳೆಯಾದಿತು' ಎಂಬ ಎಚ್ಚರಿಕೆಯನ್ನು ನೀಡುತ್ತಾರೆ. ಪ್ರಕೃತಿಯ ಸಂಪೂರ್ಣ ಪರಿಜ್ಞಾನವನ್ನು ಹೊಂದಿದ್ದ ಶರಣರು ಚರಾಚರಗಳಲ್ಲಿಯೂ ಅಸ್ತಿತ್ವವನ್ನು ಕಂಡರು. ಶರಣರ ಚಿಂತನಾ ಕ್ರಮದಲ್ಲಿ ಪ್ರಜ್ಞೆ ಎನ್ನುವುದು ಮನುಷ್ಯರಲ್ಲಿ ನಡೆಯುವ ಆಂತರಿಕ ಕ್ರಿಯೆ. ಪ್ರಜ್ಞೆ ಇಲ್ಲಿ ಅಂತರಂಗದ ಧ್ವನಿ. ಪರಿಸರ–ಮನುಷ್ಯನ ಸುತ್ತಮುತ್ತಲಿನ ಹೊರಲೋಕ, ಜೀವಜಾಲವನ್ನು ತನ್ನ ಒಡಲಲ್ಲಿ ಇಟ್ಟುಕೊಂಡ ಬಾಹ್ಯಲೋಕ. 'ಜಗದಗಲ ಮುಗಿಲಗಲ ಮಿಗೆಯಗಲ ಬ್ರಹ್ಮಾಂಡದಿಂದತ್ತತ್ತ ನಿಮ್ಮ ಮುಕುಟ, ಪಾತಾಳದಿಂದತ್ತ ಶ್ರೀಚರಣ' ಎನ್ನುವ ಮೂಲಕ ಭಗವಂತನನ್ನು ತೋರಿಸುತ್ತಾರೆ. ಪ್ರಕೃತಿಯನ್ನು ಪ್ರೀತಿಸುವ ಮನೋಭಾವನೆ ನಮ್ಮದಾದರೆ ಬರುವ ತೊಂದರೆಗಳನ್ನು ತಡೆಗಟ್ಟಬಹುದು. ಮರಗಳನ್ನು ಬೆಳೆಸುವ ಮೂಲಕ ಪ್ರಕೃತಿಯ ವಿಕೃತಿಗಳನ್ನು ತಪ್ಪಿಸಬಹುದು. ಇಂತಹ ಈ ವಚನ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯನ್ನು ಪ್ರಕೃತಿ ಶಬ್ದದ ಹಿನ್ನೆಲೆಯಲ್ಲಿ ಗ್ರಹಿಸುವ ಚಿಕ್ಕ ಪ್ರಯತ್ನವೇ ಈ ಬರಹ.

ವಚನ ಸಾಹಿತ್ಯದ ಶ್ರೇಷ್ಠತೆ ಇರುವುದೇ ಅದರ ಬಹುಮುಖಿ ಸಂವೇದನೆಯಲ್ಲಿ. ವಚನಕಾರರೆಲ್ಲಾ ಕಲ್ಯಾಣವನ್ನು ಕೇಂದ್ರವನ್ನಾಗಿರಿಸಿಕೊಂಡು ಅವರ ನಾಡಿನ, ದೇಶದ ವೈವಿಧ್ಯತೆಯ ಪರಿಸರಗಳ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಭಕ್ತಿಯ ನಿರೂಪಣೆಯಲ್ಲಿ ಸಾಂದರ್ಭಿಕವಾಗಿ ಉಪಮೆ, ದೃಷ್ಟಾಂತ, ರೂಪಕ, ಪ್ರತಿಮೆಗಳ ರೂಪದಲ್ಲಿ ನಿಸರ್ಗದ ಸಾವಯವ ಪರಿಕರಗಳನ್ನು ಬಳಸಿಕೊಂಡಿರುವುದು ವಚನಗಳಿಂದ ತಿಳಿದು ಬರುತ್ತದೆ. ಅಮೂರ್ತವಾಗಿರುವ ಅನುಭವವನ್ನು ಮೂರ್ತಿಸಲು, ಅನುಭಾವವನ್ನು ಪರಿಣಾಮಕಾರಿಯಾಗಿ ಅರ್ಥೈಸಲು, ಅಭಿವ್ಯಕ್ತಿಗೆ ಖಚಿತವಾಗಿ ನಿದರ್ಶನ ನೀಡುವ ಮೂಲಕ ತಿಳಿಪಡಿಸಲು – ಹೀಗೆ ಹಲವಾರು ಕಾರಣಗಳಿಂದ ಪರಿಸರದ ಪರಿಕರಗಳನ್ನು ವಚನಕಾರರು ಬಳಸಿಕೊಂಡಿದ್ದರು.

ಶರಣರು ಪ್ರಕೃತಿ ವಿಕೋಪಗಳನ್ನು ನೋಡುವ ಪರಿ ಕೂಡ ಅನನ್ಯ. ಈ ಸೃಷ್ಟಿ ಸಹಜವಾಗಿ ಎಷ್ಟು ಸುಂದರವಾಗಿ ಕಾಣುತ್ತದೆಯೋ, ಅಷ್ಟೇ ಸಹಜವಾಗಿ ಅಲ್ಲೋಲ ಕಲ್ಲೋಲಗಳೂ ನಡೆಯುತ್ತವೆ. ಉದಾಹರಣೆಗೆ ಭೂಕಂಪ, ಸುನಾಮಿ, ಅತಿವೃಷ್ಟಿ, ಸುಂಟರಗಾಳಿ. ಇಂತಹ ವಿಕೋಪ ಸಂದರ್ಭವನ್ನು ಮನುಷ್ಯ ಹೇಗೆ ಎದುರಿಸಬೇಕೆಂಬುದನ್ನು ಅಲ್ಲಮಪ್ರಭುಗಳ ಈ ವಚನ ನಿರೂಪಿಸುತ್ತದೆ:

**'ಕೆಂಡದ ಮಳೆ ಕರೆವಲ್ಲಿ ಉದಕವಾಗಬೇಕು**
**ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು**
**ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು**
**ಜಗತ್ತು ಪ್ರಳಯವಾದಲ್ಲಿ ತನ್ನ ತಾ ಬೀಡಬೇಕು**
**ಗುಹೇಶ್ವರನೆಂಬ ಲಿಂಗ ತಾನಾಗಿರಬೇಕು'**

ಹುಟ್ಟಿನೊಂದಿಗೆ ಹುಟ್ಟುವ ಸಾವನ್ನು ಅಲ್ಲಮರು ಈ ರೀತಿ ವಚನದಲ್ಲಿ ಅನಾವರಣಗೊಳಿಸಿದ್ದಾರೆ. ನಮ್ಮ ಬದುಕಿನಲ್ಲಿ ಕಷ್ಟಗಳು ಯಾವ ರೂಪದಲ್ಲಾದರೂ ಬರಬಹುದು, ಅದನ್ನೂ ಊಹೆ ಮಾಡಲು ಸಾಧ್ಯವಾಗುವುದಿಲ್ಲ. ಅವು ಮುನ್ಸೂಚನೆ ಇಲ್ಲದೆ ಬಂದು, ಮೈಮೇಲೆ ಎರಗಿಬಿಡುತ್ತವೆ. ಆಗ ಆತ್ಮವಿಶ್ವಾಸದಿಂದ ಆಲೋಚಿಸುತ್ತ, ಕೆಂಡದ ಮಳೆಯಾದರೆ ಸ್ವತಃ ನೀರಾಗಬೇಕು, ಜಲಪ್ರಳಯವಾದರೆ, ವಾಯುವಿನ ಸ್ವರೂಪ ಪಡೆಯಬೇಕು, ಬಿರುಗಾಳಿ ಬೀಸಿದರೆ ಆಕಾಶದಲ್ಲಿ ತೇಲಬೇಕು. ಇಡೀ ಬ್ರಹ್ಮಾಂಡವೇ ಆಪತ್ತಿನಲ್ಲಿದ್ದರೆ ಸಂತೋಷದಿಂದ ತನ್ನ ತಾ ಬಿಟ್ಟು ನಿಸರ್ಗದಲ್ಲಿ ಬೆರೆತುಬಿಡಬೇಕು. ಇಡೀ ಜಗತ್ತೇ ಪ್ರಳಯದಲ್ಲಿ ತೊಳೆದುಕೊಂಡು ಹೋಗುತ್ತಿದ್ದರೆ ಮನುಷ್ಯನಾದವನು ಆ ಪರಿಸ್ಥಿತಿಗೆ ಅನುಗುಣವಾಗಿ ತನ್ನ ತಾ ಬೀಡಲು ಹಿಂದೇಟು ಹಾಕಬಾರದು. ಆ ನಿರ್ಧಾರದಲ್ಲಿ ಧೈರ್ಯ ತುಂಬಿರಬೇಕೇ ಹೊರತು ಯಾವುದೇ ಅನುಮಾನ, ವಿಷಾದಗಳಿರಬಾರದು. ಮನುಷ್ಯ ತನ್ನ ಜೀವನದ ನಲೆಯನ್ನು ಅರಿವಿನ ಪಥದ ಮೂಲಕ, ಪ್ರಕೃತಿಯ ಸಹಾಯದಿಂದ ಅರಿಯುವ ಪ್ರಯತ್ನ ಮಾಡಿದರೆ ಆಗ ಬದುಕಿನ ವಿಸ್ಮಯದಲ್ಲಿ ತಾನೂ ವಿಸ್ಮಯತೆಯನ್ನು ಕಂಡುಕೊಳ್ಳಬಹುದು. ಈ ಭೂಮಿಯನ್ನು ತಾಯಿಯೆಂದು ಆರಾಧಿಸುವ ಜನಪದೀಯರಲ್ಲಿರುವ ಪ್ರಕೃತಿ ಭಾವ ನಮ್ಮ ಚನ್ನಬಸವಣ್ಣನ ಈ ವಚನಗಳಲ್ಲಿಯೂ ಕಾಣಸಿಗುತ್ತದೆ.

**'ನಾ ನೋಡುತಿಹ ಆಕಾಶ ಚಂದ್ರಸೂರ್ಯರ**
**ಭಕ್ತರ ಮಾಡಿದಲ್ಲದೇ ನಾ ನೋಡೆನಯ್ಯ**
**ಜಲವ ಭಕ್ತನ ಮಾಡಿಲ್ಲದೆ ನಾನು ಬಳಸೆನಯ್ಯ**
**ನಾನು ಕೊಂಬ ಹದಿನೆಂಟು ಧ್ಯಾನವ ಭಕ್ತನ ಮಾಡಿದಲ್ಲದೆ**
**ಕೊಳ್ಳೆನು ಕೂಡಲಚೆನ್ನಸಂಗಾ ನಿಮ್ಮಾಣೆ.'**

ಪ್ರಕೃತಿ ಮನುಷ್ಯನಿಗೆ ಕೊಡುವ ಕೈ, ಉಣಿಸುವ ತಾಯಿ, ಸಲಹುವ ದೈವ. ಮನುಷ್ಯನು ತನ್ನ ಜೀವಿತಾವಧಿಯಲ್ಲಿ ಜೀವನ ಸಾಗಿಸಲು ಬೇಕಾದುದನ್ನೆಲ್ಲವನ್ನು ಪ್ರಕೃತಿಯಿಂದ ಪಡೆದುಕೊಳ್ಳುತ್ತಾನೆ. ಮೇಲೆ ಉಲ್ಲೇಖಿಸಿದ ಚನ್ನಬಸವಣ್ಣನವರ ವಚನಗಳಲ್ಲಿಯೂ ಅದೇ ಆಶಯವಿದೆ. ಭೂಮಿ ನೀಡಿ, ನೀಡಿ ಭಕ್ತನಾಗಿರುವ ಪರಿಯನ್ನು ಗಮನಿಸಬಹುದು. ಅದರಂತೆಯೇ ನಾವು ಭಕ್ತಿ ಭಾವದಿಂದ ಭೂಮಿಯನ್ನು ಕಾಯಬೇಕು. ಆಕಾಶದಲ್ಲಿರುವ ಸೂರ್ಯ–ಚಂದ್ರರು, ಬೇಸಾಯಕ್ಕೆ ಬಳಸುವ ನೀರು, ಬೆಳೆದ ಬೆಳೆ ಕೊಳ್ಳುವ ಬಗೆ ಎಲ್ಲವನ್ನೂ ಭಕ್ತಿಯಿಂದ ಗೌರವಿಸುವ

ಗುಣ ವೇದ್ಯವಾಗುತ್ತದೆ. ಭಕ್ತಿಯ ಸಂದರ್ಭದಲ್ಲಿ ಅನುಭವದ ನೆಲೆ, ಪ್ರಕೃತಿಯ ಸಂದರ್ಭದಲ್ಲಿ ಅನುಭಾವದ ನೆಲೆಯನ್ನು ಮುಂದಿನ ಈ ವಚನದಲ್ಲಿ ಬಸವಣ್ಣ ಕಟ್ಟಿಕೊಡುವ ರೀತಿ ಅನನ್ಯವಾದುದು.

**‘ಭಕ್ತಿ ಎಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ**
**ಲಿಂಗವೆಂಬ ಎಲೆಯಾಗಿತ್ತು ವಿಚಾರವೆಂಬ ಹೂವಾಗಿತ್ತು**
**ಆಚಾರವೆಂಬ ಕಾಯಾಗಿತ್ತು. ನಿಷ್ಪತ್ತಿಯೆಂಬ ಹಣ್ಣಾಗಿತ್ತು**
**ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ**
**ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ’**

ಆಚಾರ ವಿಚಾರಗಳಿಂದ ಬೆಳೆದ ಭಕ್ತಿಯ ಪರಿಪೂರ್ಣ ಸ್ವರೂಪ ಹೇಳುತ್ತ, ಯಾವುದೇ ಬೆಳೆ ಬೆಳೆಯಬೇಕಾದರೆ ಪ್ರಕೃತಿ ಅತ್ಯಗತ್ಯ. ಇಲ್ಲಿ ಭಕ್ತಿಯೇ ಭೂಮಿ, ಶ್ರದ್ಧೆ ಮತ್ತು ಭಕ್ತಿಯೆಂಬ ಪೃಥ್ವಿ ಇದೆ. ಆದರೆ ಶ್ರದ್ಧೆ ಸರಿಯಾದ ಮಾರ್ಗದಲ್ಲಿ ನಡೆಯಬೇಕಾದರೆ ಅದಕ್ಕೆ ಗುರು ಮುಖ್ಯ. ಅರಿವಿನ ಬೀಜ ಬಿದ್ದಲ್ಲಿ ಲಿಂಗವೆಂಬ ಎಲೆಯು ವಿಕಸಿತಗೊಂಡು ಸಸ್ಯದ ಸಮಗ್ರ ಬೆಳವಣಿಗೆಯಲ್ಲಿ ಎಲೆ ಮತ್ತು ಬೇರು ಪ್ರಮುಖ ಪಾತ್ರ ವಹಿಸುತ್ತವೆ. ಎಲೆಯು ಮೂಡಿದ ಮೇಲೆ ಆಲೋಚನೆಗಳು, ಅರಿವಿಚಾರಗಳು ಹುಟ್ಟಿಕೊಳ್ಳುತ್ತವೆ. ಈ ವಿಚಾರಗಳ ಅರಳುವಿಕೆಯನ್ನು ಬಸವಣ್ಣ ಹೂವಾಗಿ ಕಂಡಿದ್ದಾರೆ. ವಿಚಾರ ಮತ್ತು ಪ್ರಕೃತಿಯ ಭಾವಗಳ ಸಮನ್ವಯತೆಯೇ ಶರಣರ ಸಂಸ್ಕೃತಿಯ ಜೀವಾಳ. ಹೀಗಾಗಿ ವಿಚಾರವೆಂಬ ಹೂ ಆಚಾರವೆಂಬ ಕಾಯಾಗಿ ಪರಿವರ್ತನೆಗೊಳ್ಳುತ್ತದೆ. ನಂತರ ಪರಿಪೂರ್ಣತೆ ಎಂಬ ನಿಷ್ಪತ್ತಿ ಎಂಬ ಹಣ್ಣಾಗಿ ರೂಪಗೊಳ್ಳುತ್ತದೆ. ಆ ಹಣ್ಣು ಕೂಡಲ ಸಂಗಮದೇವವೆಂಬ ಜಂಗಮ ಸಮಾಜವು ತನಗೆ ಬೇಕೆಂದು ಆಯ್ದುಕೊಳ್ಳುತ್ತದೆ. ಸೃಷ್ಟಿಯೊಳಗಿನ ಸಸಿಯ ಬೆಳವಣಿಗೆಯನ್ನು ಭಕ್ತನ ಅಂತರಂಗದ ವಿಕಾಸಕ್ಕೆ ಹೋಲಿಸುವ ಬಸವಣ್ಣನವರ ಪರಿ ಸರ್ವಕಾಲಿಕವಾದದ್ದು. ಮುಂದೆ ಅಕ್ಕ ತನ್ನ ಭಾವದಲ್ಲಿ ಈ ಪ್ರಕೃತಿಯ ಕಣಕಣವೂ ಜೀವಂತಿಕೆಯಿಂದ ತುಂಬಿದೆ ಎಂಬುದನ್ನು ಈ ಕೆಳಗಿನ ವಚನದ ಮೂಲಕ ತಿಳಿಸುತ್ತಾಳೆ.

**‘ಅಳಿಸಂಕುಲವೆ ಮಾಮರವೆ**
**ಬೆಳದಿಂಗಳೆ ಕೋಗಿಲೆಯೆ**
**ನಿಮ್ಮೆಲ್ಲರನೂ ಒಂದ ಬೇಡುವೆನು**
**ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವ**
**ಕಂಡಡೆ ಕರೆದು ತೋರಿರೆ.’**

ಅಕ್ಕ ಚೆನ್ನಮಲ್ಲಿಕಾರ್ಜುನನ ಹುಡುಕಾಟದಲ್ಲಿ ತನ್ನ ಸುತ್ತ ಮುತ್ತಲು ಆವರಿಸಿದ ಇಡೀ ಪ್ರಕೃತಿಯ ಮೊರೆ ಹೋಗುತ್ತಾಳೆ. ವನದಲ್ಲಿರುವ ಪಶು, ಪಕ್ಷಿ, ಗಿಡ, ಮರಗಳನ್ನು

ಕರಳು ಬಗೆದು ನಿವೇದಿಸಿಕೊಳ್ಳುತ್ತಾಳೆ. ಮೇಲ್ನೋಟಕ್ಕೆ ಬಾಹ್ಯ ಹುಡುಕಾಟವೇನಿದ್ದರೂ ಅದರೊಳಗಿನ ಆಂತರಿಕ ಹುಡುಕಾಟವನ್ನು ಗಮನಿಸಬಹುದು. ಮುಂದೆ ಅಲ್ಲಮನು ಪ್ರಾಕೃತಿಕ ಹಾಗೂ ಪಾರಮಾರ್ಥಿಕ ಸಂಬಂಧದ ಕುರಿತು:

**‘ಎತ್ತಣ ಮಾಮರ ಎತ್ತಣ ಕೋಗಿಲೆ**
**ಎತ್ತಣಿಂದೆತ್ತ ಸಂಬಂಧವಯ್ಯ?**
**ಬೆಟ್ಟದ ಮೇಲಣ ನೆಲ್ಲಿಯ ಕಾಯಿ**
**ಸಮುದ್ರದೊಳಗಣ ಉಪ್ಪು**
**ಎತ್ತಣದಿಂದೆತ್ತ ಸಂಬಂಧವಯ್ಯ?**
**ಗುಹೇಶ್ವರಲಿಂಗಕ್ಕೂ ಎಮಗೂ**
**ಎತ್ತಣಿಂದೆತ್ತ ಸಂಬಂಧವಯ್ಯ?’**

ಪ್ರಕೃತಿಯಲ್ಲಿ ಕಾಣಸಿಗುವ ಮಾವು, ಮತ್ತು ಕೋಗಿಲೆ; ನೆಲ್ಲಿಕಾಯಿ ಮತ್ತು ಉಪ್ಪು ಇವುಗಳ ಸಂಬಂಧ ಹೇಗೆ ಸಹಜವಾಗಿದೆಯೋ ಅಂತೆಯೇ ಗುಹೇಶ್ವರ ಮತ್ತು ನನ್ನ ನಡುವಣ ಸಂಬಂಧ. ವಸಂತ ಋತುವಿನಲ್ಲಿ ಬರುವ ಫಲ ಮಾವಿಗೂ, ಕೋಗಿಲೆಯ ಸಂತಸದ ಕುಹೂ ಕುಹೂ ಕೂಗಿಗು ಇರುವ ಅವಿನಾಭಾವ ಸಖ್ಯ; ಹಾಗೆಯೇ ಎಲ್ಲೋ ಬೆಳೆಯುವ ನೆಲ್ಲಿಕಾಯಿಗೂ ಸಮುದ್ರದಲ್ಲಿ ಸಂಸ್ಕರಣೆಗೂ ಮುನ್ನ ಅಡಗಿರುವ ಉಪ್ಪಿಗೂ ಇರುವ ನಂಟು; ಅದೇ ಮನುಷ್ಯನಿಗೂ ಮತ್ತು ಗುಹೇಶ್ವರನಿಗೂ ಇರುವ ಅವಿನಾಭಾವ ಸಂಬಂಧ, ಅದೇ ಅರಿವಿನ ಪಥ. ಸೃಷ್ಟಿಯ ಆರಂಭದಿಂದಲೂ ಪ್ರಕೃತಿ ತನ್ನ ಕೊಡುಗೆಯನ್ನು ಹೇರಳವಾಗಿ ನೀಡುತ್ತಲೇ ಬಂದಿದೆ. ಅದರೊಳಗಿನ ವಿಸ್ಮಯವನ್ನು ಕೌತುಕವಾಗಿ ಕಾಣುವ ರೀತಿ ಮತ್ತು ಪ್ರಶ್ನಿಸುವ ರೀತಿ ಈ ಕೆಳಗಿನ ವಚನದ ಮೂಲಕ ಕಟ್ಟಿಕೊಡುತ್ತಾಳೆ.

**‘ಈಳೆ ನಿಂಬೆ ಮಾವು ಮಾದಲಕ್ಕೆ**
**ಹುಳಿ ನೀರನೆರೆದವರಾರಯ್ಯ?**
**ಕಬ್ಬು ಬಾಳೆ ಹಲಸು ನಾರಿವಾಳಕ್ಕೆ**
**ಸಿಹಿ ನೀರನೆರೆದವರಾರಯ್ಯ?**
**ಕಳವೆ ರಾಜಾನ್ನ ಶಾಲ್ಯನ್ನಕ್ಕೆ**
**ಓಗರದ ಉದಕವನೆರೆದವರಾರಯ್ಯ?**
**ಮರುಗ ಮಲ್ಲಿಗೆ ಪಚ್ಚೆ ಮಡಿವಾಳಕ್ಕೆ**
**ಪರಿಮಳದುದಕವನೆರೆದವರಾರಯ್ಯ?**
**ಇಂತೀ ಜಲ ಒಂದೇ ನೆಲ ಒಂದೇ ಆಕಾಶ ಒಂದೇ**
**ಒಂದೇ ಜಲವು ಹಲವು ದ್ರವ್ಯಂಗಳು ಕೂಡಿ**
**ತನ್ನ ಪರಿ ಬೇರಾಗಿಹ ಹಾಂಗೆ**
**ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು**
**ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿ ಬೇರೆ!’**

ಪ್ರಕೃತಿಯಲ್ಲಿ ಅಡಗಿರುವ ರುಚಿಯ ವಿಸ್ಮಯವನ್ನು ಅಕ್ಕನ ವಚನ ಅನಾವರಣ ಮಾಡುತ್ತದೆ. ಆ ಚನ್ನಮಲ್ಲಿಕಾರ್ಜುನ ದೇವನೇ ಅಂದರೆ ಪ್ರಕೃತಿ ತತ್ವವೇ ಈ ವಿಶೇಷ, ವಿಭಿನ್ನತೆಗೆ ಕಾರಣ. ಎಲ್ಲವೂ ನೀರು, ಭೂಮಿ, ಆಕಾಶ, ಗಾಳಿ, ಬೆಳಕನ್ನೇ ಅವಲಂಬಿಸಿದ್ದರೂ ವಿವಿಧ ರೂಪದಲ್ಲಿ ಹಣ್ಣು, ಹೂವು ಹೊರಹೊಮ್ಮುವುದು. ಅದೇ ರೀತಿ ಈ ಜಗತ್ತಿನಲ್ಲಿರುವ ಎಲ್ಲಾ ಜೀವ ರಾಶಿಗಳು ಬದುಕು ಸಾಗಿಸುತ್ತಿದ್ದರೂ ಎಲ್ಲರೂ ಭಿನ್ನ ವಿಭಿನ್ನವಾಗಿ ತೋರುತ್ತಾರೆ. ಕನ್ನಡದ ಅನುಭಾವಿಕ ಲೋಕವು ಮಣ್ಣಿನಿಂದ ಹುಟ್ಟಿ ಬಂದ ಕಾಯವು ಮಣ್ಣು ಸೇರುವುದು ಎಂದರೆ ಪರಿಸರದ ಜೈವಿಕ ಚಕ್ರದ ಮೂಲಕ ನಿಸರ್ಗವನ್ನು ಸೇರುವುದು ಆಗಿದೆ.

**‘ಪೃಥ್ವಿ ಪೃಥ್ವಿಯ ಕೂಡುವ ಮುನ್ನ**
**ಅಪ್ಪು ಅಪ್ಪುವ ಕೂಡುವ ಮುನ್ನ**
**ತೇಜ ತೇಜ ಕೂಡದ ಮುನ್ನ**
**ವಾಯು ವಾಯುವ ಕೂಡದ ಮುನ್ನ**
**ಆಕಾಶ ಆಕಾಶ ಕೂಡದ ಮುನ್ನ**
**ಪಂಚೇಂದ್ರಿಯಗಳೆಲ್ಲ ಹಂಚುಹರಿಯಾಗದ ಮುನ್ನ**
**ಚನ್ನಮಲ್ಲಿಕಾರ್ಜುನನಿಗೆ ಶರಣೆನ್ನಿರಿ.’**

ಆರಾಧಿಸುವ ದೈವವನ್ನು ಕೂಡುವುದೆಂದರೆ ಅದು ಒಂದು ಬಗೆಯಲ್ಲಿ ಪರಿಸರದ ಪಂಚಭೂತಗಳಾದ ಜಲ, ವಾಯು, ಅಗ್ನಿ, ಆಕಾಶ, ಮಣ್ಣು (ಭೂಮಿ) ಒಡನೆ ಸಮ್ಮಿಳಿತವಾಗುವುದು, ಲೀನವಾಗುವುದು. ಸೃಷ್ಟಿಯ ತತ್ವಗಳಾದ ಪಂಚಭೂತಗಳು ಮತ್ತು ಮನುಷ್ಯನೊಳಗಿರುವ ಪಂಚಭೂತ ತತ್ವಗಳು, ಎರಡು ಒಂದೇ ಎಂದು ಅರಿವಿಗೆ ದಕ್ಕಿದಾಗ ಮೇಲಿನ ವಚನ ಹೆಚ್ಚು ಹೆಚ್ಚು ಮನದಾಳಕ್ಕಿಳಿಯುತ್ತದೆ. ಮನಸ್ಸು ದೇವರಲ್ಲಿ ಸಿಲುಕಿದ ಬಳಿಕ ಭವವಿಲ್ಲ ಎಂದು ಹೇಳುತ್ತಾ:

**‘ಲೋಕದ ಚೇಷ್ಟೆಗೆ ವೃಕ್ಷವೇ ಬೀಜವಾದಂತೆ**
**ಕರಣಂಗಳ ಚೇಷ್ಟೆಗೆ ಮನವೇ ಬೀಜ**
**ಎನಗೊಳಗೊಂದು ಮನ**
**ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ**
**ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನ’**

ಸೂರ್ಯ ಇಲ್ಲದೆ ಈ ಜಗತ್ತನ್ನು ಕಲ್ಪಿಸಲಿಕ್ಕಾಗದು. ಸೂರ್ಯ ಇದ್ದಾನೆಂದೇ ಸಸ್ಯಲೋಕ, ಪ್ರಾಣಿಲೋಕ, ಮತ್ತು ಮಾನವ ಲೋಕಗಳು ಜೀವಂತವಾಗಿವೆ. ಜಗತ್ತಿನ ಎಲ್ಲಾ ಚಟುವಟಿಕೆಗಳಿಗೆ ಸೂರ್ಯನೇ ಮೂಲವಾಗುತ್ತಾನೆ. ಅದೇ ರೀತಿ ಕರಣಗಳ ವರ್ತನೆಗೆ ಮನವೇ ಮೂಲಕಾರಣ ಎನ್ನುತ್ತ ಮುಂದೆ ಪ್ರಕೃತಿಯ ಕುರಿತಾಗಿ ಜೇಡರ ದಾಸಿಮಯ್ಯ ತನ್ನ ವಚನದಲ್ಲಿ ಈ ರೀತಿಯಾಗಿ ಹೇಳುತ್ತಾನೆ.

**‘ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ**
**ಸುಳಿವ ಸುಸುವ ಗಾಳಿ ನಿಮ್ಮ ದಾನ**
**ನಿಮ್ಮ ದಾನವನುಂಡು ಅನ್ಯರ ಹೊಗಳುವ**
**ಕುನ್ನಿಗಳನೇನೆಂಬೆ, ರಾಮನಾಥ.’**

ಈ ವಚನದಲ್ಲಿ ಮಾನವನ ಸ್ವಾರ್ಥಪರ ದೃಷ್ಟಿಕೋನ ಮತ್ತು ದೂಡಸ್ಥಿಕೆಯ ಕುರಿತಾಗಿ ಮನುಜರು ಪ್ರಕೃತಿಯಲ್ಲಿ ಇರುವ ಯಾವುದೇ ಪ್ರಕೃತಿ ನಿರ್ಮಿತ ವಸ್ತುವನ್ನು ಉಪಯೋಗಿಸಲು ಬಂದವರು ಹೊರತು ದಾನವನ್ನು ಮಾಡುವಷ್ಟು ದೊಡ್ಡವರಲ್ಲ. ದೇವ ನಿರ್ಮಿತ ಆಸ್ತಿಯನ್ನು ಯಾವನೋ ದಬ್ಬಾಳಿಕೆಯಿಂದ ಕಬಳಿಸಿ ದುರ್ಬಲರಾದವರು ಆತನ ಹೊಲದಲ್ಲೇ ದುಡಿದು ಬದುಕಿ ಆತನನ್ನೇ ಹೊಗಳುವ ಕಾಲವನ್ನು ಕಂಡು ಇಳೆ, ಬೆಳೆ, ಗಾಳಿ, ರಾಮನಾಥನ ಮತ್ತು ಪ್ರಕೃತಿಯ ದಾನವೆಂದು ಸಾರಿದ ಶಿವಶರಣ ದಾಸಿಮಯ್ಯ.

ಈ ಮೇಲಿನ ಎಲ್ಲ ಶರಣರ ವಚನಗಳನ್ನು ಗಮನಿಸಿದಾಗ ನಮಗೆ ತಿಳಿದು ಬರುವುದು ದೀಪ, ಬೆಳಗು, ಧೂಪ, ಅಗ್ನಿ, ತಳಿರು, ಪುಷ್ಪ, ಜಲ, ಗಾಳಿ, ನೀರು ಮುಂತಾದ ಅಂಶಗಳನ್ನೊಳಗೊಂಡು ಪರಿಸರದ ಕಾಳಜಿ. ಇಲ್ಲಿ ಪರಿಸರ ಕೇಂದ್ರಿತವಾದ ಪ್ರಜ್ಞೆ ಮುಖ್ಯವಾದುದು ಗಮನಾರ್ಹ. ಬಸವಾದಿ ಶರಣರು ಇಡೀ ಬ್ರಹ್ಮಾಂಡದ ಅಸ್ತಿತ್ವ, ಅದರ ಪರಿಕಲ್ಪನೆ, ಪ್ರಕೃತಿ ಪ್ರಜ್ಞೆ, ಆಂತರಿಕ ಅರಿವು, ಸಹಜವಾಗಿ ಇಟ್ಟುಕೊಂಡೇ ಬದುಕಿದವರು. ಇಡೀ ಸೃಷ್ಟಿಯನ್ನು ಒಪ್ಪಿಕೊಳ್ಳುವ, ಸರ್ವರನ್ನೂ ಅಪ್ಪಿಕೊಳ್ಳುವ ಹೃದಯ ವೈಶಾಲ್ಯ ಅವರಲ್ಲಿ ಸಹಜವಾಗಿ ಮೈಗೂಡಿತ್ತು. ಇಂದು ನಾವು ಹೇಳುವ ಜಾಗತೀಕರಣದ ಪರಿಕಲ್ಪನೆ ಅಂದಿನ ಶರಣರ ಬದುಕಿನಲ್ಲಿ ನಿಶ್ಚಲವಾಗಿದ್ದುದನ್ನು ನಾವು ಕಾಣಬಹುದು.

## ಪರಾಮರ್ಶನ ಗ್ರಂಥಗಳು:


1. ಕಲ್ಬುರ್ಗಿ ಎಂ.ಎಂ. (ಸಂ), (1994), ಸಮಗ್ರ ವಚನ ಸಂಪುಟ–೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
2. ವೀರಣ್ಣ ರಾಜೂರ (ಸಂ), (2001), ಶಿವಶರಣೆಯರ ವಚನಗಳು ಸಂಪುಟ–೧, ಗುರುದತ್ತ ಪ್ರಿಂಟರ್ಸ್, ಬೆಂಗಳೂರು.
3. ಮಲ್ಲಾಪುರ ಬಿ.ವಿ. (ಸಂ), (2019), ಅಲ್ಲಮಪ್ರಭುದೇವರ ವಚನ ಸಂಪುಟ: ೧–೨, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
4. ನಿಜಲಿಂಗಪ್ಪ ಮಟ್ಟಿಹಾಳ (ಸಂ), (2015), ವಚನ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆ, ರವಿ ಗ್ರಾಫಿಕ್ಸ್, ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.